2266 (2489) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ):– ಮಾನ್ಯ ಸದಸ್ಯರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿರುವ ಕಲ್ಯಾಣ ಮಂಟಪಗಳಲ್ಲಿ ನಡೆಯುವ ಮದುವೆ ಕಾರ್ಯಕ್ರಮಗಳಲ್ಲಿ ಆರ್ಕೆಸ್ಟ್ರಾ ಮತ್ತು ವಾದ್ಯಗಳಿಂದ ಬರುತ್ತಿರುವ ಶಬ್ಧ ಮಾಲಿನ್ಯದಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸಾರ್ವಜನಿಕರಿಗೆ ಹಾಗೂ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದು ಈ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ;

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು):

ಅ&ಆ) ಕಲ್ಯಾಣ ಮಂಟಪದ ಮಾಲೀಕರುಗಳಿಗೆ ಮದುವೆ ಕಾರ್ಯಕ್ರಮಗಳಲ್ಲಿ ಆರ್ಕೆಸ್ಟ್ರ ಮತ್ತು ವಾದ್ಯಗಳನ್ನು ಬಾಕ್ಸ್ ಮಾದರಿಯ ಸ್ಪೀಕರ್‌ಗಳನ್ನು ಇಟ್ಟುಕೊಂಡು ಕಾರ್ಯಕ್ರಮ ನಡೆಸುವಂತೆ ಈಗಾಗಲೇ ಸೂಚನೆ ನೀಡಲಾಗಿದೆ. ಈ ಬಗ್ಗೆ ವಿದ್ಯಾರ್ಥಿಗಳಿಂದಾಗಲೀ ಅಥವಾ ಸಾರ್ವಜನಿಕ–ರಿಂದಾಗಲೀ ದೂರುಗಳು ಬಂದಲ್ಲಿ ಸಂಬಂಧಪಟ್ಟ ಕಲ್ಯಾಣ ಮಂಟಪದ ಮಾಲೀಕರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು.

2267(2493) ಶ್ರೀ ಬಾಲಕೃಷ್ಣ ಹೆಚ್. ಸಿ. (ಮಾಗಡಿ):– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಗಡಿ ತಾಲ್ಲೂಕಿನ ಕೋರಮಂಗಲ ಹಾಗೂ ತೂಬಿಕೆರೆ ಗ್ರಾಮಗಳಲ್ಲಿ ಹೊಸ ಕೆರೆಗಳನ್ನು ಪ್ರಾರಂಭ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಆ) ಈ ಕಾಮಗಾರಿಗಳಿಗೆ 2005–06ನೇ ಸಾಲಿನ ಆಯವ್ಯಯದಲ್ಲಿ ಹಣ ನೀಡಲಾಗುವುದೇ; ವಿವರ ನೀಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ:– (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಕೋರಮಂಗಲ ಕೆರೆಯನ್ನು ಅನುದಾನದ ಕೊರತೆಯಿಂದ ಕಾಮಗಾರಿಯನ್ನು ಮುಂದುವರಿಸಲು ಸಾಧ್ಯವಾಗುತ್ತಿಲ್ಲ. ತೂಬಿನಕೆರೆ ಎನ್ನೂ ಮಂಜೂರು ಆಗಿರುವುದುದಿಲ್ಲ.

ಆ) ಅನುದಾನದ ಲಭ್ಯತೆ ಮೇಲೆ ಕೋರಮಂಗಲ ಕೆರೆ ಕಾಮಗಾರಿಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

2268(2824) ಶ್ರೀ ಭರಮಗೌಡ (ರಾಜು) ಅಲಗೌಡ ಕಾಗೆ:– ಮಾನ್ಯ ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿಪ್ಪರಗಿ ಜಲಾಶಯದಲ್ಲಿ ನೀರು ನಿಲ್ಲಿಸಲಾಗಿದ್ದು, ನೀರಿನ ಪ್ರಮಾಣ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಥಣಿ, ರಾಯಬಾಗ ಹಾಗೂ ಜಮಖಂಡಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಅಭಾವ ಪ್ರಾರಂಭವಾಗಿದ್ದು, ಈ ಅಭಾವ ನೀಗಿಸಲು ಸರ್ಕಾರದ ಕಾರ್ಯಕ್ರಮಗಳೇನು?